ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1995-96, 1996-97ನೇ ಸಾಲಿಗೆ ಸರ್ಕಾರವು ಮುಜರಾಯಿ ದೇವಸ್ಥಾನಗಳ ಅಭಿವೃದ್ಧಿಗೆ ಎಷ್ಟು ಹಣ ಬಿಡುಗಡೆ ಮಾಡಿದೆ?

ಆ) ಇದು ಅತ್ಯಂತ ಕಡಿಮೆಯಲ್ಲವೇ?

ಇ) ದೇವಸ್ಥಾನಗಳಿಂದ ಸರ್ಕಾರಕ್ಕೆ ಬರುವ ಆದಾಯ ಎಷ್ಟು? (1995-96, 1996-97ನೇ ಸಾಲಿಗೆ ತಲಾ)

ಈ) ಸರ್ಕಾರ ದೇವಸ್ಥಾನಗಳ ಅಭಿವೃದ್ಧಿಗೆ ಕೊಡುವ ಅನುದಾನವನ್ನು ಹೆಚ್ಚಿಸಲು ಕ್ರಮ ತೆಗೆದುಕೊಳ್ಳಲಾಗುವುದೇ?

ಶ್ರೀ ಬಿ.ಮುನಿಯಪ್ಪ ಮುದ್ದಪ್ಪ (ಮುಜರಾಯಿ ಸಚಿವರು):

ಅ)

	ದುರಸ್ಥಿ	ನಿರ್ಮಾಣ
1995-96	2,06,00,000-00	2,20,60,000-00
1996-97	1,26,00,000-00	1,05,00,000-00

ಆ) ಅನುದಾನ ಕೋರಿ ಬರುವ ಅರ್ಜಿಗಳು ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ಸರ್ಕಾರದಿಂದ ಹಾಲಿ ಮಂಜೂರು ಮಾಡುತ್ತಿರುವ ಮೊಬಲಗು ಬೇಡಿಕೆಗೆ ಅನುಗುಣವಾಗಿರುವುದಿಲ್ಲ.

ಇ) ದೇವಸ್ಥಾನಗಳಿಂದ ಸರ್ಕಾರಕ್ಕೆ ಯಾವುದೇ ಆದಾಯ ಬರುತ್ತಿಲ್ಲ ಆದರೆ ಆಯಾಯ ಪ್ರದೇಶಗಳಲ್ಲಿ ಜಾರಿಯಲ್ಲಿರುವ ಕಾಯ್ದೆಗಳಲ್ಲಿ ಅವಕಾಶ ಮಾಡಿಕೊಂಡಿರುವಂತೆ ಕೊಡಗು ಜಿಲ್ಲೆ ಹೊರತುಪಡಿಸಿ ದೇವಸ್ಥಾನಗಳ ಆಡಳಿತ ನಿರ್ವಹಣೆ ಬಗ್ಗೆ ನೇಮಕಾತಿ ಮಾಡಿಕೊಂಡ ಇಲಾಖಾ ಸಿಬ್ಬಂದಿಗೆ ವೇತನ ಮತ್ತಿತರ ಭತ್ಯೆಯನ್ನು ಭರಿಸಲು ಆಡಳಿತ ನಿರ್ವಹಣಾ ವೆಚ್ಚವನ್ನು ವಿವಿಧ ಶೇಕಡಾವಾರು ದರದಲ್ಲಿ ದೇವಾಲಯಗಳಿಂದ ವಸೂಲಿ ಮಾಡಲಾಗುತ್ತದೆ.

ಈ) ಪೂಜಾಸ್ಥಾನಗಳ ದುರಸ್ತಿ ಮತ್ತು ಜೀರ್ಣೋದ್ಧಾರದ ಬಗ್ಗೆ ಬಂದಿರುವ ಬೇಡಿಕೆಯ ಹಿನ್ನೆಲೆಯಲ್ಲಿ ಆರ್ಥಿಕ ಸಹಮತಿ ದೊರೆತಲ್ಲಿ ಅನುದಾನವನ್ನು ಹೆಚ್ಚಿಸಲಾಗುವುದು.

ವಿಷಯ: ವಿಟ್ಲ ಕ್ಷೇತ್ರದಲ್ಲಿ ಬಸ್ಸು ಸರ್ವೀಸ್ ಕುರಿತು.

ಶ್ರೀ ಎ.ರುಕ್ಮಯ್ಯ ಪೂಜಾರಿ (ವಿಟ್ಲ): ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಿಟ್ಲ ವಿಧಾನಸಭಾ ಕ್ಷೇತ್ರಕ್ಕೆ ಸೇರಿದ ಶಂಬೂರು, ಬರಿಮಾರು, ಕಡೇಶ್ಯಾಲ್ಯ, ಕೋಡಪದವು, ಸಾಲೆತ್ತೂರು ಇತ್ಯಾದಿ ಪ್ರದೇಶಗಳಿಗೆ ಬಸ್ಸು ಸರ್ವೀಸು ಹೆಚ್ಚಿಸುವ ಬಗ್ಗೆ ಸಾರ್ವಜನಿಕರಿಂದ ಸರ್ಕಾರಕ್ಕೆ ಬೇಡಿಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಬಸ್ಸು ಸರ್ವೀಸುಗಳನ್ನು ಹೆಚ್ಚಿಸಲು ಸರ್ಕಾರ ಕ್ರಮ ತೆಗೆದುಕೊಳ್ಳುವುದೇ?

ಶ್ರೀ ಪಿ.ಜಿ.ಆರ್.ಸಿಂಧ್ಯ (ಸಾರಿಗೆ ಸಚಿವರು):

ಅ) ಹೌದು.

ಆ) ಹಾಲಿ ಕ.ರಾ.ರ.ಸಾ. ಸಂಸ್ಥೆಯು ಮಂಗಳೂರಿನಿಂದ ಪ್ರತಿದಿನ ರಾಷ್ಟ್ರೀಕೃತವಾದ ಪ್ರದೇಶದಲ್ಲಿರುವ ಬರಿಮಾರುಗೆ ನಾಲ್ಕು ಏಕಮುಖ ಸುತ್ತುವಳಿಗಳು, ಕೋಡಪದವುಗೆ ನಾಲ್ಕು ಏಕಮುಖ ಸುತ್ತುವಳಿಗಳು, ಕಡೇ ಶಿವಾಲಯಕ್ಕೆ 12 ಏಕಮುಖ ಸುತ್ತುವಳಿಗಳು ಹಾಗೂ ಸಾಲೆತ್ತೂರಿಗೆ 17 ಏಕಮುಖ ಸುತ್ತುವಳಿಗಳು ಹಾಗೂ ರಾಷ್ಟ್ರೀಕೃತವಾಗದಿರುವ ಪ್ರದೇಶದಲ್ಲಿರುವ ಶಂಭೂರಿಗೆ 8 (ಎಂಟು) ಏಕಮುಖ ಸುತ್ತುವಳಿಗಳನ್ನು ಕಾರ್ಯಾಚರಣೆ ಮಾಡುತ್ತಿದ್ದು ಹಾಲಿ ಈ ಸಾರಿಗೆಗಳು ಪ್ರಯಾಣಿಕರ ಅವಶ್ಯಕತೆಗಳನ್ನು ಸಮರ್ಪಕವಾಗಿ ಪೂರೈಸುತ್ತಿವೆ. ಆದಾಗ್ಯೂ ರಾಷ್ಟ್ರೀಕೃತ ಪ್ರದೇಶದಲ್ಲಿರುವ ಸ್ಥಳಗಳಿಗೆ ಅವಶ್ಯಕತೆಗೆ ಅನುಗುಣವಾಗಿ ಹೆಚ್ಚಿನ ಸಾರಿಗೆ ಸೌಲಭ್ಯ ಕಲ್ಪಿಸಲಾಗುವುದು.

ವಿಷಯ: ರಾಜ್ಯದಲ್ಲಿ ಕೃಷಿ ವಿಜ್ಞಾನ ಕಾಲೇಜುಗಳ ಕುರಿತು.

2678 (3262)

ಶ್ರೀ ಎನ್.ರಾಜಣ್ಣ (ಭಾರತೀನಗರ): ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಎಷ್ಟು ಕೃಷಿ ವಿಜ್ಞಾನ ಕಾಲೇಜುಗಳಿವೆ?

ಆ) ರಾಜ್ಯದಲಿ ಪ್ರತಿ ಜಿಲ್ಲೆಗೊಂದು ಕೃಷಿ ವಿಜ್ಞಾನಕ್ಕೆ ಸಂಬಂಧಿಸಿದ ಕಾಲೇಜುಗಳನ್ನು ಸ್ಥಾಪಿಸುವ ಪ್ರಸ್ತಾವನೆ ಇದೆಯೇ?

ಇ) ಹಾಗಿದ್ದಲ್ಲಿ, ಈ ಬಗ್ಗೆ ಕ್ರಮ ತೆಗೆದುಕೊಂಡಿರುವ: ಉದ್ದೇಶಿಸಿರುವ ಕ್ರಮವೇನು?

ಶ್ರೀ ಸಿ.ಬೈರೇಗೌಡ (ಕೃಷಿ ಸಚಿವರು):